# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 283 |
| ಉತ್ತರಿಸಬೇಕಾದ ದಿನಾಂಕ | : | 15.02.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಪೂರ್ಣ ಮಟ್ಟದಲ್ಲಿ ಗೋಶಾಲೆಗಳನ್ನು ಇದುವರೆವಿಗೂ ಆರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಗೋಶಾಲೆಗಳನ್ನು ಆರಂಭಿಸುವುದಕ್ಕೆ ಇರುವ ತೊಂದರೆಗಳೇನು; | ಸರ್ಕಾರಿ ಗೋಶಾಲೆಗಳನ್ನು ಪ್ರಾರಂಭಿಸಲು ಸರಿಯಾದ ಸರ್ಕಾರಿ/ಗೋಮಾಳ ಜಮೀನುಗಳು ಲಭ್ಯವಾಗದಿರುವುದು ಹಾಗೂ ಗೋಶಾಲೆಗಳನ್ನು ನಿರ್ಮಿಸಲು ವಹಿಸಲಾದ ನಿರ್ಮಾಣ ಸಂಸ್ಥೆಗಳು ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸದಿರುವುದರಿಂದ ವಿಳಂಬವಾಗುತ್ತಿದೆ. |
| ಇ) | ಗೋಶಾಲೆಗಳ ಜೊತೆಗೆ ಅಗತ್ಯ ಪಶುವೈದ್ಯ ಸಿಬ್ಬಂದಿಗಳನ್ನು ಸಹ ನೇಮಿಸಲು ಕ್ರಮ ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು) | ಸರ್ಕಾರದ ಆದೇಶ ಸಂ:ಇ–ಪಸಂಮೀ 31 ಪಪಾಯೋ 2022, ದಿನಾಂಕ:06.06.2022 ರ ಮಾರ್ಗಸೂಚಿಯಂತೆ ಗೋಶಾಲೆಗಳ ನಿರ್ವಹಣೆಗೆ ಅಗತ್ಯ ಪಶುವೈದ್ಯ ಸಿಬ್ಬಂದಿಗಳ ಕಾರ್ಯವ್ಯವಸ್ಥೆ ಮಾಡಲಾಗಿದೆ.<br>1) ಸರ್ಕಾರಿ ಗೋಶಾಲೆಯಲ್ಲಿನ ನಿರ್ವಹಣೆಗಾಗಿ ವ್ಯಾಪ್ತಿ ಪ್ರದೇಶದ ಪಶುವೈದ್ಯಕೀಯ ಸಂಸ್ಥೆಯ ಮುಖ್ಯಸ್ಥರವರನ್ನು ಪ್ರಭಾರಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಹತ್ತಿರದ ಪಶುವೈದ್ಯಕೀಯ ಸಂಸ್ಥೆಯ ಜಾನುವಾರು ಅಧಿಕಾರಿ/ಜಾನುವಾರು ಅಭಿವೃದ್ಧಿ ಅಧಿಕಾರಿಯನ್ನು ಗೋಶಾಲೆಯ ದಿನನಿತ್ಯದ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಗೋಶಾಲೆ ವ್ಯವಸ್ಥಾಪಕರಾಗಿ ನಿಯುಕ್ತಿಗೊಳಿಸಿ ಜಿಲ್ಲಾ ಉಪನಿರ್ದೇಶಕರು ಆದೇಶ ನೀಡುವುದು. ತಾಲ್ಲೂಕಿನ ಮುಖ್ಯ ಪಶುವೈದ್ಯಾಧಿಕಾರಿ(ಆಡಳಿತ) ಇವರು ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಗೋಶಾಲೆಗಳ ಮೇಲುಸ್ತುವಾರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಅಧಿಕಾರಿಗಳು ಗೋಶಾಲೆಯ ಸಂಪೂರ್ಣ ನಿರ್ವಹಣೆ ಜವಾಬ್ದಾರಿಯನ್ನು ಹೊಂದಿರುತ್ತಾರೆ.<br>2) ಸರ್ಕಾರಿ ಗೋಶಾಲೆಗಳಲ್ಲಿನ ಪ್ರತಿ **100** ಜಾನುವಾರುಗಳ ನಿರ್ವಹಣೆಗೆ **03** ಪಾಳಿಯಲ್ಲಿ ಗರಿಷ್ಠ **07** ಜನಕೂಲಿ/ಹೊರಗುತ್ತಿಗೆ ಹಾಗೂ ಗೋಸ್ವಯಂ ಸೇವಕರ ಸೇವೆಯನ್ನು ಪಡೆಯಬಹುದಾಗಿರುತ್ತದೆ. ಹೆಚ್ಚುವರಿ ಪ್ರತಿ 50 ಜಾನುವಾರುಗಳಿಗೆ ಹೆಚ್ಚುವರಿಯಾಗಿ ಒಂದು ಕೂಲಿಯವರನ್ನು ಹೊರಗುತ್ತಿಗೆ ಸೇವೆಯನ್ನು ಪಡೆಯಲಾಗಿದೆ. |

**ಇ–ಪಸಂಮೀ 37 ಸಲೆವಿ 2023**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಸಾಲಿನ ಆಯವ್ಯಯ ಕಂಡಿಕೆ-53 ರಡಿ ಘೋಷಣೆಯಾಗಿರುವ ಗೋ ಸಂಪತ್ತಿನ ಸಂರಕ್ಷಣೆಗೆ ಪ್ರಸ್ತುತ ರಾಜ್ಯದಲ್ಲಿರುವ ಗೋಶಾಲೆಗಳ ಸಂಖ್ಯೆಯನ್ನು 31 ರಿಂದ 100 ಕ್ಕೆ ಹೆಚ್ಚಿಸಲಾಗುವ ಯೋಜನೆಗೆ ಅನುಸರಿಸಬೇಕಾದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:-

1. 2022-23ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-53.
2. ಸರ್ಕಾರದ ಆದೇಶ ಸಂಖ್ಯೆ:65 ಪಪಾಯೋ 2021, ದಿನಾಂಕ:11.08.2021.
3. ಸರ್ಕಾರದ ಆದೇಶ ಸಂಖ್ಯೆ:ಇ-ಪಸಂಮೀ 31 ಪಪಾಯೋ 2022, ದಿನಾಂಕ:12.04.2022.
4. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: CAHVS-VTA0VIG/18/2022-DIRAHVS-COMM AHVS.
5. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/53/ವೆಚ್ಚ-4/2022, ದಿನಾಂಕ:05.04.2022.

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ 2022-23ನೇ ಸಾಲಿನ ಆಯವ್ಯಯದ ಕಂಡಿಕೆ-53 ರಲ್ಲಿ ಗೋ ಸಂಪತ್ತಿನ ಸಂರಕ್ಷಣೆಗೆ ಸರ್ಕಾರ ಹೆಚ್ಚಿನ ಮಹತ್ವ ನೀಡಿದೆ. ಈ ಹಿನ್ನೆಲೆಯಲ್ಲಿ ಕಳೆದ ವರ್ಷ ಗೋ ಹತ್ಯಾ ನಿಷೇಧ ಅಧಿನಿಯಮ, 2020 ನ್ನು ಜಾರಿಗೆ ತರಲಾಗಿದೆ. ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ಪ್ರಸ್ತುತ ರಾಜ್ಯದಲ್ಲಿರುವ ಗೋಶಾಲೆಗಳ ಸಂಖ್ಯೆಯನ್ನು 31 ರಿಂದ 100 ಕ್ಕೆ ಹೆಚ್ಚಿಸಲಾಗುವುದು. ಈ ಉದ್ದೇಶಕ್ಕೆ 50 ಕೋಟಿ ರೂ.ಗಳನ್ನು ಒದಗಿಸಲಾಗುವ ಯೋಜನೆ ಘೋಷಣೆಯಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಂತೆ ರಾಜ್ಯದಲ್ಲಿ ಗೋಸಂಪತ್ತಿನ ರಕ್ಷಣೆಗಾಗಿ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ 2020 ಜಾರಿಗೆ ಬಂದಿರುವುದರಿಂದ ಇದಕ್ಕೆ ಪೂರಕವಾಗಿ ಗೋಹತ್ಯೆ ತಡೆಯಲು ಹಾಗೂ ಜಾನುವಾರುಗಳನ್ನು ಸಂರಕ್ಷಿಸಲು ಮೊದಲನೇ ಹಂತದಲ್ಲಿ ಒಟ್ಟಾರೆಯಾಗಿ ರೂ.1500.00 ಲಕ್ಷಗಳ ಅನುದಾನದಲ್ಲಿ ಇಡಿ ರಾಜ್ಯದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಗೋಶಾಲೆ ಪ್ರಾರಂಭಿಸಲು ಮಾರ್ಗಸೂಚಿಗಳನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಂತೆ 2022-23ನೇ ಸಾಲಿನ ಆಯವ್ಯಯ ಕಂಡಿಕೆ-53 ರಲ್ಲಿ ಘೋಷಣೆಯಾಗಿರುವಂತೆ ಗೋ ಸಂಪತ್ತಿನ ಸಂರಕ್ಷಣೆಗೆ ಸರ್ಕಾರ ಹೆಚ್ಚಿನ ಮಹತ್ವ ನೀಡಿದ್ದು, ಕಳೆದ ವರ್ಷ ಗೋ ಹತ್ಯಾ ನಿಷೇಧ ಅಧಿನಿಯಮ, 2020 ಜಾರಿಗೆ ಬಂದಿರುವುದರಿಂದ ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ಪ್ರಸ್ತುತ ರಾಜ್ಯದಲ್ಲಿರುವ ಗೋಶಾಲೆಗಳ ಸಂಖ್ಯೆಯನ್ನು 31 ರಿಂದ 100 ಕ್ಕೆ ಹೆಚ್ಚಿಸಲಾಗಿದ್ದು, ಈ ಉದ್ದೇಶಕ್ಕಾಗಿ ರೂ.50.00 ಕೋಟಿಗಳನ್ನು ಒದಗಿಸಲಾಗುವ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

...2

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಂತೆ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಕಡತದಲ್ಲಿ 2022-23ನೇ ಸಾಲಿನ ಆಯವ್ಯಯ ಕಂಡಿಕೆ-53 ರಲ್ಲಿ ಘೋಷಣೆಯಾಗಿರುವಂತೆ ಗೋ ಸಂಪತ್ತಿನ ಸಂರಕ್ಷಣೆಗೆ ಸರ್ಕಾರ ಹೆಚ್ಚಿನ ಮಹತ್ವ ನೀಡಿದ್ದು, ಕಳೆದ ವರ್ಷ ಗೋ ಹತ್ಯಾ ನಿಷೇಧ ಅಧಿನಿಯಮ, 2020 ಜಾರಿಗೆ ಬಂದಿರುವುದರಿಂದ ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ಪ್ರಸ್ತುತ ರಾಜ್ಯದಲ್ಲಿರುವ ಗೋಶಾಲೆಗಳ ಸಂಖ್ಯೆಯನ್ನು 31 ರಿಂದ 100 ಕ್ಕೆ ಹೆಚ್ಚಿಸಲಾಗಿದ್ದು, ಈ ಉದ್ದೇಶಕ್ಕಾಗಿ ರೂ.50.00 ಕೋಟಿಗಳನ್ನು ಒದಗಿಸಲಾಗುವ ಯೋಜನೆಯನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಂತೆ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾಗಿರುವ ಈ ಕಾರ್ಯಕ್ರಮಕ್ಕೆ ಲೆಕ್ಕ ಶೀರ್ಷಿಕೆ:2403-00-102-2-40 (ಪಿಂಜರಾಪೋಲ್ ಮತ್ತು ಗೋಶಾಲೆಗಳಿಗೆ ನೆರವು) ಉಪ ಲೆಕ್ಕ ಶೀರ್ಷಿಕೆ:059 (ಇತರೆ ವೆಚ್ಚಗಳು) ರಡಿ ರೂ.2000.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಪ್ರತಿ ಗೋಶಾಲೆಗೆ ರೂ.50.00 ಲಕ್ಷದಂತೆ ಅನುದಾನವನ್ನು ಹೆಚ್ಚಿಸಲಾಗಿದ್ದು, ಒಟ್ಟು ಗೋಶಾಲೆಗಳ ಸಂಖ್ಯೆಯನ್ನು 100 ಕ್ಕೆ ಹೆಚ್ಚಿಸುವುದು ಹಾಗೂ ಇನ್ನುಳಿದ ರೂ.1500.00 ಲಕ್ಷಗಳನ್ನು ಮುಂದುವರೆದ ಕಾರ್ಯಕ್ರಮಗಳಿಗೆ ವಿನಿಯೋಗಿಸಿ, ಅದರಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಎಂದು ತಿಳಿಸಲಾಗಿದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 31 ಪಪಾಯೋ 2022**

**ಬೆಂಗಳೂರು, ದಿನಾಂಕ:06.06.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23ನೇ ಸಾಲಿನ ಆಯವ್ಯಯ ಕಂಡಿಕೆ-53 ರಲ್ಲಿ ಘೋಷಣೆಯಾಗಿರುವಂತೆ ಗೋ ಸಂಪತ್ತಿನ ಸಂರಕ್ಷಣೆಗೆ ಸರ್ಕಾರ ಹೆಚ್ಚಿನ ಮಹತ್ವ ನೀಡಿದ್ದು, ಕಳೆದ ವರ್ಷ ಗೋ ಹತ್ಯಾ ನಿಷೇಧ ಅಧಿನಿಯಮ, 2020 ಜಾರಿಗೆ ಬಂದಿರುವುದರಿಂದ ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ಪ್ರಸ್ತುತ ರಾಜ್ಯದಲ್ಲಿರುವ ಗೋಶಾಲೆಗಳ ಸಂಖ್ಯೆಯನ್ನು 31 ರಿಂದ 100 ಕ್ಕೆ ಹೆಚ್ಚಿಸಲಾಗಿದ್ದು, ಈ ಉದ್ದೇಶಕ್ಕಾಗಿ ರೂ.50.00 ಕೋಟಿಗಳನ್ನು ಒದಗಿಸಲಾಗುವ ಯೋಜನೆಗೆ ಸಂಬಂಧಿಸಿದಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್ ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನ ಸೌಧ ಬೆಂಗಳೂರು.

...3

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ / ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ / ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ / ಕಂದಾಯ ಇಲಾಖೆ.
5. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
7. ಎಲ್ಲಾ ಜಿಲ್ಲಾಧಿಕಾರಿಗಳು/ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಯುಕ್ತರ ಮುಖಾಂತರ)
8. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು. (ಆಯುಕ್ತರ ಮುಖಾಂತರ)
9. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
10. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ (ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಮುಖಾಂತರ)
12. ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
13. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಪಶುಭವನ, ಬೆಂಗಳೂರು.

ಪ್ರತಿಗಳು:-

1. ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಕಂಟ್ರೋಲ್ ರೂಂ ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಆಪಸಂ/ಅನಿ[ಜಾಗೃತ]/ವಿವ-4/2022-23** **ದಿನಾಂಕ:17-06-2022**

**ಪ್ರತಿಯನ್ನು ಕೆಳಕಂಡ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.**

1. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಪ್ರಾಣಿ ದಯಾಸಂಘ.
2. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು.
3. ಜಿಲ್ಲಾ ಉಪ ನಿರ್ದೇಶಕರು ಆಡಳಿತ ಹಾಗೂ ಸದಸ್ಯ ಕಾರ್ಯದರ್ಶಿ ಜಿಲ್ಲಾ ಪ್ರಾಣಿ ದಯಾ ಸಂಘ.

ಆಯುಕ್ತರು(ಪರವಾಗಿ)

ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 31 ಪಪಾಯೋ 2022
ದಿನಾಂಕ:06.06.2022 ರ ಆದೇಶದಲ್ಲಿ ಉಲ್ಲೇಖಿಸಿರುವ
"ಪ್ರಸ್ತುತ ರಾಜ್ಯದಲ್ಲಿರುವ ಗೋಶಾಲೆಗಳ ಸಂಖ್ಯೆಯನ್ನು 31 ರಿಂದ 100ಕ್ಕೆ ಹೆಚ್ಚಿಸಲಾಗುವ"
ಯೋಜನೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಮಾರ್ಗಸೂಚಿಗಳು ಕೆಳಕಂಡಂತಿವೆ.

1 ಜಿಲ್ಲಾ ಉಪನಿರ್ದೇಶಕರು/ಸದಸ್ಯಕಾರ್ಯದರ್ಶಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಜಿಲ್ಲಾ ಪ್ರಾಣಿ ದಯಾ ಸಂಘ ರವರು ಸರ್ಕಾರದ ಆದೇಶ ಸಂ:ಇ-ಪಸಂಮೀ/31/ ಪಪಾಯೋ/2022, ದಿನಾಂಕ12.04.2022 ರಂತೆ ಪ್ರತಿ ಜಿಲ್ಲೆಗೆ ನಿಗದಿಪಡಿಸಿದ ಗುರಿಗಳಂತೆ ಗೋಶಾಲೆಗಳನ್ನು ಪ್ರಾರಂಭಿಸಲು ಕ್ರಮವಹಿಸುವುದು. ಪ್ರತಿ ಗೋಶಾಲೆಗೆ ಕನಿಷ್ಠ10 ಎಕರೆಯಂತೆ ಸರ್ಕಾರಿ/ಗೋಮಾಳ ಜಮೀನನ್ನು ಗುರುತಿಸುವುದು ಹಾಗೂ ಆ ಜಮೀನನ್ನು ಉಪನಿರ್ದೇಶಕರು/ಸದಸ್ಯಕಾರ್ಯದರ್ಶಿ, ಜಿಲ್ಲಾಪ್ರಾಣಿ ದಯಾ ಸಂಘ ರವರ ಹೆಸರಿಗೆ ನೋಂದಣಿ ಮಾಡಿಸುವುದು.

2. ಸದರಿ ಜಮೀನಿನಲ್ಲಿ ಗೋಶಾಲೆಯನ್ನು ಪ್ರಾರಂಭಿಸಲು ಸರ್ಕಾರದ ಜಂಟಿ ಸುತ್ತೋಲೆ ಸಂಖ್ಯೆ:ಆರ್.ಡಿ.ಇ.ಜಿ.ಎಸ್/219/2021 ದಿನಾಂಕ:04-03-2022 ರಲ್ಲಿನ ಮಾರ್ಗಸೂಚನೆಗಳಂತೆ ಯೋಜನಾ ವರದಿಯನ್ನು ತಯಾರಿಸುವುದು.

3. ಜಿಲ್ಲಾಉಪನಿರ್ದೇಶಕರು (ಆಡಳಿತ) ರವರು ಗೋಶಾಲೆ ನಿರ್ಮಾಣ/ನಿರ್ವಹಣೆಗಾಗಿ ಬಿಡುಗಡೆ ಆದ ಅನುದಾನಕ್ಕೆ ಅನುಗುಣವಾಗಿ ಜಿಲ್ಲಾ ಪ್ರಾಣಿ ದಯಾ ಸಂಘ (SPCA) ರವರಿಂದ ಪಡೆದ ಸ್ವೀಕೃತನ ರಶೀದಿಯ (payees Receipt) ಮೇಲೆ ಬಿಲ್ಲನ್ನು ನಿಯಮಾನುಸಾರ ತಯಾರಿಸಿ, ಸಂಬಂಧಪಟ್ಟ ವಿಭಾಗೀಯ ಜಂಟಿನಿರ್ದೇಶಕರು (ರಾಜ್ಯವಲಯ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರ ಮೇಲು ಸಹಿ ಪಡೆದು ಖಜಾನೆಯಿಂದ ಹಣಸೆಳೆಯತಕ್ಕದ್ದು.

4. ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಗೊಳಿಸಲಾದ ಅನುದಾನವನ್ನು ವೆಚ್ಚವಾದ ನಂತರ ಗೋಶಾಲಾ ನಿರ್ವಹಣೆಗೆ ಹೆಚ್ಚಿನ ಅನುದಾನ ಅವಶ್ಯವಿದ್ದಲ್ಲಿ, ಅಧ್ಯಕ್ಷರು ಜಿಲ್ಲಾ ಪ್ರಾಣಿ ದಯಾಸಂಘ ಇವರ ಶಿಫಾರಸ್ಸಿನೊಂದಿಗೆ ಈ ಮೊದಲು ಬಿಡುಗಡೆಯಾದ ಅನುದಾನದ ಹಣ ಸದ್ವಿನಿಯೋಗ ಪ್ರಮಾಣ ಪತ್ರ ಸಹಿತ ಆಯುಕ್ತರು, ಪಶುಪಾಲನಾ ಮತ್ತುಪಶುವೈದ್ಯ ಸೇವಾಇಲಾಖೆ ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

5. ಸಮುದಾಯ ದನದ ಕೊಟ್ಟಿಗೆಗಳ ನಿರ್ಮಾಣ, ಅರಣ್ಯೀಕರಣ ಬಯೋಫೆನ್ಸಿಂಗ್, ಕೃಷಿಹೊಂಡ, ಸಂಪರ್ಕರಸ್ತೆಗಳ ನಿರ್ಮಾಣ, ಬದುಹಾಕುವುದು, ಅವಶ್ಯವಿರುವ ಕಡೆ ಜಲಾನಯನ ಅಭಿವೃದ್ಧಿ ಕೆಲಸಗಳು ಮತ್ತು ಚೆಕ್‌ಡ್ಯಾಂ ಇತ್ಯಾದಿಗಳ ನಿರ್ಮಾಣಕ್ಕಾಗಿ MGNREGS ಯೋಜನೆಯಡಿಯಲ್ಲಿ ಒಮ್ಮುಖಗೊಳಿಸುವುದರ ಮೂಲಕ ಗೋಶಾಲೆಗಳನ್ನು ಅಭಿವೃದ್ಧಿ ಪಡಿಸಬಹುದಾಗಿರುತ್ತದೆ.

6. ಸರ್ಕಾರಿ ಜಮೀನಿನಲ್ಲಿ "ಸರ್ಕಾರಿಗೋಶಾಲೆ" ಗಳನ್ನು ಸ್ಥಾಪಿಸಲು ಮೊದಲ ಆದ್ಯತೆಯನ್ನು ನೀಡುವುದು.

7. ನೂತನವಾಗಿ ಘೋಷಿತ 70 ಗೋಶಾಲೆಗಳ ಸ್ಥಾಪನೆಗೆ ಜಿಲ್ಲೆ ಅಥವಾ ತಾಲ್ಲೂಕುಗಳಲ್ಲಿ ಸರ್ಕಾರಿ ಜಮೀನು/ನಿವೇಶನ ದೊರಕದಿರುವ ಪಕ್ಷದಲ್ಲಿ ಜಿಲ್ಲಾ SPCAಯು ಸೂಕ್ತ ಕಾರಣಗಳನ್ನು ದಾಖಲುಮಾಡಿ, ಜಿಲ್ಲೆಗೆ ನಿಗದಿಪಡಿಸಿದ ಗುರಿಗಳಿಗೆ ಅನುಗುಣವಾಗಿ ಮತ್ತು ತಾತ್ಕಾಲಿಕವಾಗಿ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಹಾಗೂ ಯಶಸ್ವಿಯಾಗಿ ನಿರ್ವಹಿಸುತ್ತಿರುವ ಖಾಸಗಿ ಗೋಶಾಲೆಗಳನ್ನು ಗುರುತಿಸಿ, "ಸರ್ಕಾರಿ ಅನುದಾನಿತ ಖಾಸಗಿ ಗೋಶಾಲೆಗಳೆಂದು" ಪರಿಗಣಿಸಿ, ನ್ಯಾಯಾಲಯದ ಪ್ರಕರಣದ ಜಾನುವಾರುಗಳು ಮತ್ತು ನಿರ್ಗತಿಕ ಜಾನುವಾರುಗಳಿಗೆ ಆಶ್ರಯ ನೀಡಬಹುದಾಗಿದೆ.

8. ಈಗಾಗಲೇ 30 ಜಿಲ್ಲೆಗಳಲ್ಲಿ ನಿರ್ಮಾಣಗೊಂಡಿರುವ ಸರ್ಕಾರಿ ಗೋಶಾಲೆಗಳ ನಿರ್ವಹಣೆಗಾಗಿ ಸಾರ್ವಜನಿಕರು/ಸಂಘಸಂಸ್ಥೆಗಳು ಮುಂದೆಬಂದಲ್ಲಿ, ಜಿಲ್ಲಾ ಪ್ರಾಣಿ ದಯಾ ಸಂಘದ ಅನುಮೋದನೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು "ಖಾಸಗಿ ಸಹಭಾಗಿತ್ವದ ಸರ್ಕಾರಿ ಗೋಶಾಲೆ"ಯನ್ನಾಗಿ ನಿಗದಿತ ಅವಧಿಯವರೆಗೆ ಸರ್ಕಾರದ ಅನುಮೋದನೆಯೊಂದಿಗೆ ನಿರ್ವಹಣೆ ಮಾಡಲು ನೀಡಬಹುದಾಗಿದೆ.

9. ಸರ್ಕಾರಿ ಗೋಶಾಲೆಯಲ್ಲಿನ ನಿರ್ವಹಣೆಗಾಗಿ ವ್ಯಾಪ್ತಿ ಪ್ರದೇಶದ ಪಶುವೈದ್ಯಕೀಯ ಸಂಸ್ಥೆಯ ಮುಖ್ಯಸ್ಥರವರನ್ನು "ಪ್ರಭಾರಿ ಅಧಿಕಾರಿ" ಯನ್ನಾಗಿ ನೇಮಿಸುವುದು. ಹತ್ತಿರದ ಪಶುವೈದ್ಯಕೀಯ ಸಂಸ್ಥೆಯ ಜಾನುವಾರು ಅಧಿಕಾರಿ / ಜಾನುವಾರು ಅಭಿವೃದ್ಧಿ ಅಧಿಕಾರಿಯನ್ನು ಗೋಶಾಲೆಯ ದಿನನಿತ್ಯದ ಕೆಲಸಕಾರ್ಯಗಳ ನಿರ್ವಹಣೆಗಾಗಿ "ಗೋಶಾಲೆ ವ್ಯವಸ್ಥಾಪಕರಾಗಿ" ನಿಯುಕ್ತಿಗೊಳಿಸಿ ಜಿಲ್ಲಾ ಉಪನಿರ್ದೇಶಕರು ಆದೇಶ ನೀಡುವುದು. ತಾಲ್ಲೂಕಿನ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಇವರು ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಗೋಶಾಲೆಗಳ ಮೇಲುಸ್ತುವಾರಿ ಅಧಿಕಾರಿಯಾಗಿ ಜವಾಬ್ದಾರಿ ನಿರ್ವಹಿಸತಕ್ಕದ್ದು. ಈ ಅಧಿಕಾರಿಗಳು ಗೋಶಾಲೆಯ ಸಂಪೂರ್ಣ ನಿರ್ವಹಣೆ ಜವಾಬ್ದಾರಿಯನ್ನು ಹೊಂದಿರುತ್ತಾರೆ.

10. ಗೋಶಾಲೆಯ ವ್ಯವಸ್ಥಾಪಕರು ಗೋಶಾಲೆಗೆ ಸಂಬಂಧಿಸಿದ ಎಲ್ಲಾ ದಾಸ್ತಾನು ಸಂಗ್ರಹಣೆ ಮತ್ತು ವಿತರಣೆ ಹಾಗೂ ವಹಿ ಮತ್ತು ಕಡತಗಳ ನಿರ್ವಹಣೆಯನ್ನು ಪ್ರಭಾರ ಅಧಿಕಾರಿಗಳ ಮಾರ್ಗದರ್ಶನದಲ್ಲಿ ನಿರ್ವಹಿಸುವುದು ಗೋಶಾಲೆಗೆ ಸಂಬಂಧಿಸಿದ ಮಾಸಿಕ ಮತ್ತು ವಾರ್ಷಿಕ ವರದಿಗಳನ್ನು ತಯಾರಿಸಿ ಸಂಬಂಧಿಸಿದ ಉಪನಿರ್ದೇಶಕರ ಮುಖಾಂತರ ಆಯುಕ್ತಾಲಯಕ್ಕೆ ಸಲ್ಲಿಸುವುದು ಪ್ರಭಾರಿ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ.

11. ಗೋಶಾಲೆಗಳಲ್ಲಿನ ಜಾನುವಾರುಗಳ ದಿನ ನಿತ್ಯದ ವೈದ್ಯಕೀಯ ಚಿಕಿತ್ಸೆಯನ್ನು ವ್ಯಾಪ್ತಿ ಪ್ರದೇಶದ ಪಶುವೈದ್ಯಕೀಯ ಸಂಸ್ಥೆಯ ಮುಖ್ಯಸ್ಥರ ಮತ್ತು ಸಿಬ್ಬಂದಿಗಳ ಜವಾಬ್ದಾರಿಯಾಗಿರುತ್ತದೆ.

12. ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆರವರು, ಔಷಧ ಮತ್ತು ರಾಸಾಯನಿಕಗಳ ಪೂರೈಕೆಗಾಗಿ ಜಿಲ್ಲೆಗೆ ನಿಗದಿಪಡಿಸಿದ ಅನುದಾನದಲ್ಲಿ, ಸರ್ಕಾರಿ ಗೋಶಾಲೆಗಳಲ್ಲಿನ ಜಾನುವಾರುಗಳ ದಿನ ನಿತ್ಯದ ಪಶುವೈದ್ಯಕೀಯ ಚಿಕಿತ್ಸೆಗಾಗಿ ಬೇಕಾಗುವ ಔಷಧಗಳ ಪೂರೈಕೆ ಮಾಡಲು ಪ್ರತ್ಯೇಕ ವಂಟನ ಮೀಸಲಿರಿಸುವುದು.

13. ಸರ್ಕಾರಿ ಗೋಶಾಲೆಗಳಲ್ಲಿನ ದೈನಂದಿನ ನಿರ್ವಹಣೆಯಲ್ಲಿ ತುರ್ತಾಗಿ ಅವಶ್ಯವಿರುವ ಮೇವು, ಪಶು ಆಹಾರ ಖರೀದಿ ಮತ್ತು ಸಣ್ಣಪುಟ್ಟ ಕಾಮಗಾರಿಗಳು, ದುರಸ್ತಿಗಳು, ವಿದ್ಯುತ್, ನೀರು ಮತ್ತು ಇನ್ನಿತರೆ ನಿರ್ವಹಣಾ ವೆಚ್ಚವನ್ನು ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರ ಅನುಮೋದನೆಯೊಂದಿಗೆ ಕೈಗೊಳ್ಳಲು ಗೋಶಾಲೆ ಪ್ರಭಾರಿ ಅಧಿಕಾರಿ ರವರಿಗೆ ಅಧಿಕಾರ ನೀಡಲಾಗಿದೆ. ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2403-00-102-2-40 (ಪಿಂಜರಾಪೋಲ್ ಮತ್ತು ಗೋಶಾಲೆಗಳಿಗೆನೆರವು) ಉಪ ಶೀರ್ಷಿಕೆ-059 (ಇತರೆ ವೆಚ್ಚಗಳು) ಅಡಿಯಲ್ಲಿ ಜಿಲ್ಲಾ ಪ್ರಾಣಿದಯಾ ಸಂಘಕ್ಕೆ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸುವುದು.

14. ಸರ್ಕಾರದ ವಿವಿಧ ಇಲಾಖೆಗಳಿಂದ ಗೋಶಾಲೆಗಳಿಗೆ ಸೇರ್ಪಡೆಯಾಗುವ ಜಾನುವಾರುಗಳಿಗೆ ಪ್ರತಿ ದಿನಕ್ಕೆ /ಪ್ರತಿ ಜಾನುವಾರಿಗೆ ರೂ.70-00 (ಎಪ್ಪತ್ತು ರೂಪಾಯಿ ಮಾತ್ರ) ರಂತೆ ವ್ಯಾಪ್ತಿ ಪ್ರದೇಶದ ಪಶುವೈದ್ಯಾಧಿಕಾರಿಗಳು ದೃಢೀಕರಿಸಿ ಜಿಲ್ಲಾ SPCA ಅನುಮೋದನೆಯೊಂದಿಗೆ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸುವುದು. ಸಾರ್ವಜನಿಕರು ತಂದುಬಿಡುವ ಜಾನುವಾರುಗಳಿಗೆ "ಪಿಂಜರಾಪೋಲ್ ಮತ್ತು ಗೋಶಾಲೆಗಳಿಗೆ ನೆರವು" ಕಾರ್ಯಕ್ರಮದಡಿಯಲ್ಲಿ ನೀಡಲಾಗುವ ಸಹಾಯಾನುದಾನದಡಿಯಲ್ಲಿ ವೆಚ್ಚವನ್ನು ಭರಿಸುವುದು.

15. ಜಿಲ್ಲಾ ಎಸ್.ಪಿ.ಸಿ.ಎ ಸಮಿತಿಯು ಜಿಲ್ಲೆಗಳಲ್ಲಿರುವ ಸರ್ಕಾರಿ ಗೋಶಾಲೆಗಳಿಗೆ 3 ತಿಂಗಳಿಗೆ ಬೇಕಾಗುವಷ್ಟು ಮೇವು, ಪಶುಆಹಾರ ಇತ್ಯಾದಿ ಸಾಮಗ್ರಿಗಳನ್ನು ಮುಂಗಡವಾಗಿ ನಿಯಮಾನುಸಾರ ಖರೀದಿ ಮಾಡಿ ಗೋಶಾಲೆಗಳಿಗೆ ಸರಬರಾಜು ಮಾಡುವುದು.

16. ಮೇಲೆ ವಿವರಿಸಿದ ಎಲ್ಲಾ ಗೋಶಾಲೆಗಳಲ್ಲಿ ಇಲಾಖೆಯಿಂದ ಸೇರ್ಪಡೆ ಮಾಡುವ ನಿರ್ಗತಿಕ ಮತ್ತು ನ್ಯಾಯಾಲಯದ ಪ್ರಕರಣದಲ್ಲಿನ ಜಾನುವಾರುಗಳಿಗೆ ಮಾತ್ರ ಮೇವಿನ ವೆಚ್ಚವಾಗಿ (NDRF Norms ಪ್ರಕಾರ) ಪ್ರತಿ ಜಾನುವಾರಿಗೆ ಪ್ರತಿ ದಿನಕ್ಕೆ ರೂ.70-00 ಗಳನ್ನು ನೀಡಲಾಗುವುದು. ಪಶುವೈದ್ಯಾಧಿಕಾರಿಗಳ ಶಿಫಾರಸ್ಸಿನಂತೆ ಆಯಾ ಜಾನುವಾರಿನ ವಯಸ್ಸು ಮತ್ತು ದೇಹದ ತೂಕದ ಅನುಗುಣವಾಗಿ ಮೇವನ್ನು ನೀಡುವುದು.

17. ಸರ್ಕಾರಿ ಗೋಶಾಲೆಗಳಲ್ಲಿನ ಪ್ರತಿ 100 ಜಾನುವಾರುಗಳ ನಿರ್ವಹಣೆಗೆ 3 ಪಾಳಿಯಲ್ಲಿ ಗರಿಷ್ಠ 7 ಜನಕೂಲಿ/ಹೊರಗುತ್ತಿಗೆ ಹಾಗೂ ಗೋ ಸ್ವಯಂ ಸೇವಕರ ಸೇವೆಯನ್ನು ಪಡೆಯಬಹುದಾಗಿರುತ್ತದೆ. ಹೆಚ್ಚುವರಿ ಪ್ರತಿ 50 ಜಾನುವಾರುಗಳಿಗೆ ಹೆಚ್ಚುವರಿಯಾಗಿ ಒಂದು ಕೂಲಿಯವರನ್ನು ಹೊರಗುತ್ತಿಗೆ ಸೇವೆಯನ್ನು ಪಡೆಯಬಹುದಾಗಿದೆ.

18. ಜಿಲ್ಲಾ SPCA ಯು ಸರ್ಕಾರಿ ಗೋಶಾಲೆಗಳ ಅಭಿವೃದ್ಧಿ, ನಿರ್ವಹಣೆಯನ್ನು ಸುಸ್ಥಿರವಾಗಿಸಲು ಮತ್ತು ಆರ್ಥಿಕವಾಗಿ ಸದೃಢವಾಗಿಡಲು ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ, ದೇಣಿಗೆಯನ್ನು ಹಣದ ಅಥವಾ ವಸ್ತುಗಳ ರೂಪದಲ್ಲಾದರೂ ಸ್ವೀಕರಿಸಬಹುದಾಗಿರುತ್ತದೆ.

19. ಸಾರ್ವಜನಿಕರು, ಸಂಘ ಸಂಸ್ಥೆಗಳು, ಕಂಪನಿಗಳು ಮತ್ತು ಇತ್ಯಾದಿ ಸಂಸ್ಥೆಗಳು, ಜಾನುವಾರುಗಳನ್ನು ದತ್ತು ತೆಗೆದುಕೊಳ್ಳಲು ಮುಂದೆಬಂದರೆ "ಪುಣ್ಯಕೋಟಿ ದತ್ತು ಯೋಜನೆ" ಯನ್ವಯ ಉತ್ತೇಜನ ನೀಡುವುದು.

20. ಸರ್ಕಾರಿ ಗೋಶಾಲೆಗೆ ಯಾವುದೇ ಜಾನುವಾರುಗಳು ಸೇರ್ಪಡೆ ಮಾಡುವಾಗ ಆ ಜಾನುವಾರುಗಳ ಸಂಪೂರ್ಣ ವಿವರಗಳನ್ನು ಪ್ರತ್ಯೇಕ ವಹಿಯಲ್ಲಿ ದಾಖಲಿಸುವುದು. ಗೋಶಾಲೆಯಲ್ಲಿರುವ ಜಾನುವಾರುಗಳು ಮರಣ ಹೊಂದಿದಾಗ ಅಂತಹ ಜಾನುವಾರುಗಳ ಮರಣೋತ್ತರ ವರದಿ ಹಾಗೂ ವಿವರಗಳನ್ನು ವಹಿಯಲ್ಲಿ ದಾಖಲಿಸುವುದು. ಗೋಶಾಲೆಗೆ ಸೇರ್ಪಡೆಗೊಂಡ ಜಾನುವಾರುಗಳನ್ನು ಹಿಂದಿರುಗಿಸುವಾಗ/ ಬಿಡುಗಡೆ ಮಾಡುವಾಗ ಅವುಗಳ ಸಂಪೂರ್ಣ ವಿವರಗಳನ್ನು ವಹಿಯಲ್ಲಿ ದಾಖಲಿಸುವುದು.

21. ಗೋಶಾಲೆಗಳ ದೈನಂದಿನ ಚಟುವಟಿಕೆ ಸುಗಮವಾಗಿ ನಿರ್ವಹಣೆಗಾಗಿ ಅವಶ್ಯವಿರುವ ಯಾವುದೇ ಹೆಚ್ಚುವರಿ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾ ಪ್ರಾಣಿದಯಾ ಸಂಘ ಸಂಪೂರ್ಣ ಅಧಿಕಾರ ಹೊಂದಿರುತ್ತದೆ.

(ಪಿ.ಎಸ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಪಶುಸಂಗೋಪನೆ)